ಶ್ರೀ ಬಾಪುಗೌಡ ರಾಯಪ್ಪ.—9 ಹಳ್ಳಿಗಳಲ್ಲಿ 2 ವರ್ಷಗಳಿಂದ ಈ ಕೆಲಸ ಪ್ರಾರಂಭವಾಗಿಲ್ಲ. ಆದ್ದರಿಂದ ಮ್ಯಾನೆ ಮಂತ್ರಿಗಳು ಆ ಬಗ್ಗೆ ಕ್ರಮ ತೆಗೆದು ಕೊಂಡು ತೀವ್ರಗತಿಯಲ್ಲಿ ಆ ಯೋಜನೆಯ ಕೆಲಸವನ್ನು ತೆಗೆದುಕೊಂಡು ಯೋಜನೆಯನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಯಾವ ಯಾವ ಯೋಜನೆಗಳು ಇಲ್ಲಿಯವರೆಗೆ ಮಂಜೂರಾಗಿ ಕೆಲಸ ತೆಗೆದುಕೊಳ್ಳದೆ ನಿಂತಿವೆ ಅವುಗಳನ್ನು ಕೂಡಲೇ ತೆಗೆದು ಕೊಳ್ಳುವಂತೆ ತಿಳಿಸಿದ್ದೇನೆ. ಈಗ ಇನ್ನೊಂದು ಸಾರಿ ಮಂಜೂರಾದ ಕೆಲಸ ಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

TRANSFER OF OFFICIALS OF FOOD AND CIVIL SUPPLIES DIRECTORATE

290. SRI M. B. RAMASWAMY (Anekal).—Will the Minister for Food and Forests be pleased to state :—

(a) the number of officers and officials working for the past 15 years in the Directorate of Food and Civil Supplies as well as in Bangalore City ;

(b) the reasons for not transferring the staff out of Bangalore ?

SRI K. H. PATIL (Minister for Food and Forests).—

(a)	Class— I	Nil
	Class— II	Nil
	Class— III	10
	Class— IV	16

(b) These 26 officials who are the regular candidates of the Food and Civil Supplies Department could not be transferred outside Bangalore since the Deputy Commissioner as the Head of the Department fills up all such corresponding posts in the Food and Civil Supplies Branch working in his unit by drafting the services of officers/officials of Revenue and other departments on deputation basis, as per the existing Cadre and Recruitment Rules of the Department.

ಶ್ರೀ ಎಂ. ಬಿ ರಾಮಸ್ವಾಮಿ :- ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರು ನಗರ ಆಹಾರ ವ ತ್ತು ನಿತ್ಯೋಪಯೋಗಿ ನರಬರಾಜು ನಿಗಮಗಳ ಕಾರ್ಯಾಲಯದಲ್ಲಿ ಕಳೆದ 15 ವರ್ಷಗಳಿಂದ 27 ಜನ ನೌಕರರು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದೀರಿ, ಅವರನ್ನು ಡೆಪ್ಯೂಟಿ ಕಮಿಷನರಿಗೆ ಅಟ್ಯಾಚ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಅವರು ಡೆಪ್ಯುಟಿ ಕಮಿಷನರಿಗೆ ಅಟ್ಯಾಚ್ ಆಗಿದ್ದರೆ ಅವರು 10-15 ವರ್ಷಗಳಿಂದ ಅಲ್ಲಿ ಇರುವುದಕ್ಕೆ ಕಾರಣ ವೇನು ? ಅವರನ್ನು ಅಲ್ಲಿಂದ ವರ್ಗಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ ಹೆಚ್. ಪಾಟೀಲ್ :- ಫುಡ್ ಅಂಡ್ ಸಿವಿಲ್ ಸಪ್ಲೈ ಅಫೀಸ್ ಇಂಡಿಪೆಂಡೆಂಟ್ ಆಫೀಸ್ ಅಲ್ಲ. ಅದಕ್ಕಾಗಿ ಬೇರೆ ಬೇರೆ ಡಿಪಾರ್ಟ್‌ಮೆಂಟಿನಿಂದ ನೌಕರರನ್ನು ಲೆಂಟ್ ತೆಗೆದುಕೊಂಡಿರುವುದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರನ್ನು ಪುನಃ ಪೇರೆಂಟ್ ಡಿಪಾರ್ಟ್‌ಮೆಂಟಿಗೆ ಕಳುಹಿಸುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ :- ನನ್ನ ಪ್ರಶ್ನೆ ಏನೆಂದರೆ 10-15 ವರ್ಷಗಳಿಂದ ಆ ಆಫೀಸರುಗಳನ್ನು ಅಲ್ಲಿ ಇಡುವುದಕ್ಕೆ ಕಾರಣವೇನು ? 2 ವರ್ಷ ಸರ್ವೀಸ್ ಆದಮೇಲೆ ಅವರನ್ನು ಟ್ರಾನ್ಸ್‌ಫರ್ ಮಾಡಬೇಕು ಎಂದು ನಿಯಮ ಇದೆಯೇ ಅಥವಾ ಇಲ್ಲವೇ ? ಡೆಪ್ಯುಟೇಷನ್ ಮೇಲೆ ಬಂದವರನ್ನು ಟ್ರಾನ್ಸ್‌ಫರ್ ಮಾಡಬಾರದು ಎಂದು ಸರ್ಕಾರದ ಅದೇಶವೇನಾದರೂ ಇದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ :- ಆ ರೀತಿ ಟ್ರಾನ್ಸ್‌ಫರ್ ಮಾಡಬಾರದು ಎಂದು ಸರ್ಕಾರದ ಅದೇಶವೇನೂ ಇಲ್ಲ. ಅದು ಡೆಂಪರರಿ ಡಿಪಾರ್ಟ್‌ಮೆಂಟ್ ಎಂದು ಅವರನ್ನು ಟ್ರಾನ್ಸ್‌ಫರ್ ಮಾಡಿಲ್ಲ. ಯಾರು ಯಾರನ್ನು ಅಲ್ಲಿ ಇಡುವುದಕ್ಕೆ ಯೋಗ್ಯವಾಗುತ್ತದೆ, ಯಾರು ಯಾರನ್ನು ಅಲ್ಲಿ ಇಡುವುದಕ್ಕೆ ಯೋಗ್ಯವಾಗುವುದಿಲ್ಲ ಎಂಬುದನ್ನು ವಿಚಾರ ಮಾಡಿ ಅವರವರ ಪೇರೆಂಟ್ ಡಿಪಾರ್ಟ್‌ಮೆಂಟಿಗೆ ಕಳುಹಿಸುವುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಬಿ ರಾಮಸ್ವಾಮಿ ,- ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ದೂರು ಬಂದಿದೆಯೇ ? ಒಂದುವೇಳೆ ಈ ಬಗ್ಗೆ ಸರ್ಕಾರಕ್ಕೆ ದೂರು ಬಂದರೆ ತಾವು ಏನು ಕ್ರಮ ತೆಗೆದುಕೊಳ್ಳುತೀರಿ ?

ಶ್ರೀ ಕೆ. ಹೆಚ್. ಪಾಟೀಲ್ :- ಇಬ್ಬರು ಅಧಿಕಾರಿಗಳ ಮೇಲೆ ದೂರು ಬಂದಿತ್ತು. ಆ ಬಗ್ಗೆ ತನಿಖೆಗೆ ಅಜ್ಞೆ ಮಾಡಿದ್ದೇನೆ. ಆ ದೂರು ಸಾಬೀತು ಆದರೆ ಆ ನೌಕರರನ್ನು ಮನೆಗೆ ಕಳುಹಿಸುವುದಿದ್ದರೆ ಮನೆಗೆ ಕಳುಹಿಸುತ್ತೇವೆ, ರಿವರ್ಟ್ ಮಾಡುವುದಿದ್ದರೆ ರಿವರ್ಟ್ ಮಾಡುತ್ತೇವೆ. ವರ್ಗ ಮಾಡುವುದಿದ್ದರೆ ವರ್ಗ ಮಾಡುತ್ತೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್ :- ಫುಡ್ ಅಂಡ್ ಸಿವಿಲ್ ಸಪ್ಲೈ ಆಫೀಸು ಬೇರೆ ಡಿಪಾರ್ಟ್‌ಮೆಂಟ್ ಆಗಿರಲಿ ಅಥವಾ ಟೆಂಪರರಿ ಡಿಪಾರ್ಟ್‌ಮೆಂಟ್ ಆಗಿರಲಿ ಸರ್ಕಾರದ ನೀತಿಯ ಪ್ರಕಾರ ಒಬ್ಬ ಸರ್ಕಾರಿ ಅಧಿಕಾರಿಯನ್ನು 2 ವರ್ಷಗಳ ಮೇಲೆ ಒಂದೇ ಕಡೆ ಇರಿಸಬಾರದು ಎಂದು ಇರುವಾಗ ಅದನ್ನು ಕಡ್ಡಾಯವಾಗಿ ಅನ್ವಯಿಸುವಂತೆ ನೀತಿಯನ್ನು ಜಾರಿಗೆ ತರುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :- ಅದು ಟೆಂಪರರಿ ಡಿಪಾರ್ಟ್‌ಮೆಂಟ್ ಆಗಿರುವುದರಿಂದ ಅಲ್ಲಿ ಅನುಭವಶಾಲಿಗಳು ಬೇಕು ಎಂದು ಅವರನ್ನು ಇಟ್ಟಿದ್ದೇವೆ. 2 ವರ್ಷಕ್ಕೆ ಕಡ್ಡಾಯವಾಗಿ ಎಲ್ಲರನ್ನೂ ವರ್ಗ ಮಾಡಬೇಕು ಎಂದು ಸರ್ಕಾರದ ನೀತಿಯಲ್ಲ.

LOCATION OF VARIOUS CENTRES AT HEADQUARTERS OF GROUP PANCHAYATS

295. SRI B. G. BANAKAR (Hirekerur).—

Will the Minister for Community Development and and Social Welfare be pleased to state :—

(*a*) whether the Government has any proposal to locate Gramsevak Centres, Village Accountant Centres, Co-operative Society Centres, Post Office Centres, now scattered in different villages of Group Panchayats at the Headquarters of Group Panchayats in the State ;

(*b*) whether the Government propose to take any steps to co-ordinate the working of Panchayats, Co-operatives, Village Accountants, Gramsevaks, etc., in each and every Panchayats area in the State for best and effective development of villages in the State ;

(*c*) if so, the measures the Government contemplates to take in this direction ?

SRI N. RACHAIAH.—(Minister for Community Development and Social Welfare.)